588. **ಶ್ರೀ ರಘುಪತಿ ಭಟ್ ಕೆ.** (ಉಡುಪಿ):– ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಂದಾಯ ಅಧಿನಿಯಮ 94ಸಿ ಯಡಿ ಮಾಹಿತಿ ಕೊರತೆಯಿಂದಾಗಿ ನಿಗಧಿತ ಅವಧಿಯೊಳಗೆ ಸರ್ಕಾರಕ್ಕೆ ನಮೂನೆ ಅರ್ಜಿ ಸಲ್ಲಿಸಲು ಉಡುಪಿ ಜಿಲ್ಲೆಯ ಸಹಸ್ರಾರು ಬಡ ನಿವೇಶನ ರಹಿತರಿಗೆ ನೆರವಾಗುವ ನಿಟ್ಟಿನಲ್ಲಿ ಅವಧಿ ವಿಸ್ತರಿಸುವ ಬಗ್ಗೆ ಸರ್ಕಾರದ ತೀರ್ಮಾನವೇನು;

(ಆ) ಉಚ್ಚ ನ್ಯಾಯಾಲಯದ ತೀರ್ಪಿನಂತೆ ಕುಮ್ಕಿ, ಅನಾಧೀನ, ಗೋಮಾಳ ಸ್ಥಳದಲ್ಲಿ ಕಳೆದ 10 ವರ್ಷಗಳಲ್ಲಿ ವಾಸ್ತವ್ಯ ಹೊಂದಿರುವ ಅರ್ಹ ಅಕ್ರಮ ನಿವೇಶನದಾರರಿಗೆ ಹಕ್ಕು ಪತ್ರ ನೀಡುವ ವಿಚಾರದಲ್ಲಿ ಸರ್ಕಾರ ಕೈಗೊಂಡಕ್ರಮವೇನು;

(ಇ) ಅಕ್ರಮ ವಾಸ್ತವ್ಯ ಹೊಂದಿರುವ ಅರ್ಹ ಫಲಾನುಭವಿಗಳಿಗೆ ನಮೂನೆಯಲ್ಲಿ ನೀಡಲು ಕೊನೆಯದಾಗಿ (ಈ ಬಗ್ಗೆ) ಅವಕಾಶ ಒದಗಿಸಲು ಸರ್ಕಾರ ಆಲೋಚಿಸಿದೆಯೇ;

(ಈ) ಹಾಗಿದ್ದಲ್ಲಿ, ಈ ಬಗ್ಗೆ ಯಾವ ಪರಿಹಾರ ಮಾರ್ಗ ಅನುಸರಿಸಲಾಗುವುದು?

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ಕಂದಾಯ ಸಚಿವರು):–

(ಅ) ಈ ಕಾಯಿದೆಯಡಿ ಅರ್ಜಿ ಸಲ್ಲಿಸಲು ಅರ್ಜಿದಾರರಿಗೆ ಸಮಯವನ್ನು ವಿಸ್ತರಿಸುವ ಪ್ರಸ್ತಾವನೆ ಇರುವುದಿಲ್ಲ. ಆದರೆ ಭೂಮಿಯ ಮಂಜೂರಾತಿಯ ಕಾರ್ಯವಿಧಾನದ ಪ್ರಕ್ರಿಯೆಯ ಅವಧಿಯನ್ನು ದಿನಾಂಕ 31–10–2007ರ ಅವಧಿಯೊಳಗೆ ಪೂರ್ಣಗೊಳಿಸಲು ದಿನಾಂಕ 20–03–2006ರ ಆದೇಶ ಸಂ.ಆರ್‌ಡಿ 59 ಎಲ್‌ಜಿಪಿ 2005ರಲ್ಲಿ ಅವಕಾಶ ಕಲ್ಪಿಸಲಾಗಿರುತ್ತದೆ.

ಉಚ್ಚ ನ್ಯಾಯಾಲಯದ ತೀರ್ಪಿಗನುಗುಣವಾಗಿ ಸರಕಾರದ ಸುತ್ತೋಲೆ ಸಂ:ಆರ್‌ಡಿ 83 ಎಲ್‌ಜಿಪಿ 2006, ದಿನಾಂಕ 05–01–2007ರಲ್ಲಿ ಗೋಮಾಳ, ಹುಲ್ಲುಬನ್ನಿ, ಗಾಯರಾಣ ಜಮೀನುಗಳ ವಿಸ್ತೀರ್ಣವು ಕರ್ನಾಟಕ ಭೂ ಕಂದಾಯ ನಿಯಮಾವಳಿಗಳ ನಿಯಮ 97(1)ಕ್ಕಿಂತ ಮೀರಿದ ಪ್ರಕರಣಗಳಲ್ಲಿ ಮಾತ್ರ ಆ ಜಮೀನಿನಲ್ಲಿ ಯಾರಾದರೂ ಅಕ್ರಮವಾಗಿ ಸಾಗುವಳಿ ಮಾಡಿಕೊಂಡು ಸ್ವಾಧೀನದಲ್ಲಿದ್ದು, ಅವರು ಸದರಿ ಜಮೀನನ್ನು ಪಡೆಯಲು ಅರ್ಹರಾಗಿದ್ದು, ಕರ್ನಾಟಕ ಭೂ ಕಂದಾಯ ಕಾಯ್ದೆ ಕಲಂ 94ಎ, 94ಬಿ ಮತ್ತು 94ಸಿ ರಡಿಯಲ್ಲಿ ನಿಗಧಿತ ಅವಧಿಯಲ್ಲಿ ಜಮೀನಿನ ಸಕ್ರಮೀಕರಣಕ್ಕಾಗಿ ಅರ್ಜಿ ಸಲ್ಲಿಸಿದ್ದಲ್ಲಿ

ಅವುಗಳನ್ನು ಸಕ್ರಮಗೊಳಿಸಲು ಸೂಕ್ತ ನಿರ್ಧಾರಕ್ಕಾಗಿ ಸರ್ಕಾರ ರಚಿಸಿರುವ /ರಚಿಸುವ ಬಗರ್ ಹುಕುಂ ಸಕ್ರಮೀಕರಣ ಸಮಿತಿಯ ಮುಂದೆ ಇಡಬೇಕಾಗುತ್ತದೆ.

(ಇ) ಇಲ್ಲ

(ಈ) ಮೇಲಿನ ಉತ್ತರದಿಂದಾಗಿ ಪ್ರಶ್ನೆ ಉದ್ಭವಿಸುವುದಿಲ್ಲ

250. **ಶ್ರೀ ನಿರಾಣಿ ಮುರಗೇಶ್ ರುದ್ರಪ್ಪ (ಬೀಳಗಿ):**– ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೀಳಗಿ ತಾಲ್ಲೂಕಿನ ಪುನರ್ವಸತಿ ಮತ್ತು ಪುನರ್ ನಿರ್ಮಾಣ ಕೇಂದ್ರಗಳ ಅಭಿವೃದ್ಧಿಗೆ ಗ್ರಾಮೀಣ ಭಾಗಕ್ಕೂ, ನಗರ ಭಾಗಕ್ಕೂ ಬೇರೆ ಬೇರೆ ಪ್ರಮಾಣದಲ್ಲಿ ಅಭಿವೃದ್ಧಿ ಪಡಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಹಾಗಿದ್ದಲ್ಲಿ, ಎಲ್ಲ ಕಡೆಗೂ ಒಂದೇ ತೆರೆನಾದ ಸಹಾಯ ಸವಲತ್ತು ಮತ್ತು ಸೌಲಭ್ಯಗಳನ್ನು ಕಲ್ಪಿಸುವ ಗುರಿಯನ್ನು ಸರ್ಕಾರ ಹೊಂದಿದೆಯೇ;

(ಇ) ಪುನರ್ ನಿರ್ಮಾಣ ಕೇಂದ್ರಗಳನ್ನು ಗ್ರಾಮ ಪಂಚಾಯತ್ ಸುಪರ್ದಿಗೆ ಒಪ್ಪಿಸುವ ಚಿಂತನೆ ಸರ್ಕಾರದ ಮುಂದೆ ಇದೆಯೇ;

(ಈ) ಪುನರ್ ನಿರ್ಮಾಣ ಕೇಂದ್ರಗಳಲ್ಲಿ ವಿದ್ಯುತ್, ಕುಡಿಯುವ ನೀರಿನ ಸೌಲಭ್ಯ ರಸ್ತೆಗಳ ಅಭಿವೃದ್ಧಿಯಾಗ ಬೇಕಾಗಿರುವುದರಿಂದ ಈ ನಿಟ್ಟಿನಲ್ಲಿ ಸರ್ಕಾರದ ಕ್ರಮಗಳೇನು?

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ಕಂದಾಯ ಸಚಿವರು):–

(ಅ) ಬಂದಿದೆ

(ಆ) ಇಲ್ಲ

(ಇ) ಹೌದು

(ಈ) ಎಲ್ಲಾ ಪುನರ್ವಸತಿ ಕೇಂದ್ರಗಳಿಗೆ ಅಗತ್ಯ ಮೂಲಭೂತ ಸೌಕರ್ಯವನ್ನು ಈಗಾಗಲೇ ಒದಗಿಸಲಾಗಿದೆ. ಅವಶ್ಯಕತೆಗೆ ಅನುಗುಣವಾಗಿ ಅವುಗಳ ನಿರ್ವಹಣೆಯನ್ನು ಸಹ ಮಾಡಲಾಗುತ್ತಿದೆ.